ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಿಲ್ಲಾ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆ/ ಲೆಕ್ಕಶೀರ್ಷಿಕೆಯಡಿ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳ ಕ್ರಿಯಾ ಯೋಜನೆಯ ವಿವರಗಳು, ಪ್ರಗತಿಯ ವಿವರಗಳು ಹಾಗೂ , ಉಭಯ ಸದನಗಳ ಪ್ರಶ್ನಾವಳಿಗೆ, ವಿವಿಧ ಸಮಿತಿಗಳಿಗೆ ಮಾಹಿತಿಗಳನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಗೆ ಒದಗಿಸುವ ಕುರಿತು.

**ಪ್ರಸ್ತಾವನೆ**

ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಯೋಜನೆ/ಲೆಕ್ಕಶೀರ್ಷಿಕೆಯಡಿ ರಸ್ತೆ, ಸೇತುವೆ, ಕೆರೆ ಹಾಗೂ ಸುವರ್ಣ ಗ್ರಾಮ/ಗ್ರಾಮ ವಿಕಾಸ ಯೋಜನೆಯ ಕಾಮಗಾರಿಗಳನ್ನು ಅನುಷ್ಟಾನಗೊಳಿಸಲಾಗುತ್ತಿದ್ದು, ಸದರಿ ಕಾಮಗಾರಿಗಳ ಕ್ರಿಯಾ ಯೋಜನೆಗಳು ಮತ್ತು ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವರದಿಯಗಳನ್ನು ಸಕಾಲದಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಗುತ್ತಿಲ್ಲ. ಕಾರಣ ಸದರಿ ಮಾಹಿತಿಯನ್ನು ಕ್ರೋಢಿಕೃತಗೊಳಿಸಿ ಸರ್ಕಾರಕ್ಕೆ ಸಲ್ಲಿಸುವುದು ಅತ್ಯವಶ್ಯಕವಾಗಿರುತ್ತದೆ.

ಅಲ್ಲದೆ, ಅಧಿವೇಶನ ಸಮಯದಲ್ಲಿ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮಾನ್ಯ ಸದಸ್ಯರುಗಳ ಪ್ರಶ್ನಾವಳಿಗಳಿಗೆ ಹಾಗೂ ವಿಧಾನಸಭಾ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸಲ್ಲಿಸಬೇಕಾದ ಅಗತ್ಯ ಮಾಹಿತಿಯನ್ನು ತುರ್ತಾಗಿ ಒದಗಿಸಬೇಕಾಗಿರುತ್ತದೆ.

ವಿಕೇಂದ್ರೀಕರಣ ತತ್ವದಡಿಯಲ್ಲಿ ಈ ಕೆಳಕಂಡ ಲೆಕ್ಕಶೀರ್ಷಿಕೆಗಳ ಅಡಿ ಜಿಲ್ಲಾ ಪಂಚಾಯಿತಿಗೆ ಅನುದಾನವನ್ನು ಹಂಚಿಕೆ ಮಾಡಿ ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದೆ.

1. ನಬಾರ್ಡ್- ರಸ್ತೆ ಕಾಮಗಾರಿಗಳು -5054-03-337-0-74-436
2. ನಬಾರ್ಡ್ ವಿಶೇಷ ಅಭಿವೃದ್ಧಿ ಯೋಜನೆಯಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳು-5054-03-337-0-74-133
3. ಕೆರೆಗಳ ಪುನರ್‌ಸ್ಥಿತಿ ಹಾಗೂ ಪುನಶ್ಚೇತನ ಯೋಜನೆ ಲೆಕ್ಕಶೀರ್ಷಿಕೆ:2702-01-101-0-73-059
4. ನಬಾರ್ಡ್ ಯೋಜನೆಯಡಿ ಕೆರೆಗಳ ಪುನರುಜ್ಜೀವನ-ಲೆಕ್ಕಶೀರ್ಷಿಕೆ: 4702-00-101-1-14-436/437/438 (ಯೋಜನೆ)
5. CMGSY-3054-80-196-1-03 ( PLAN – Dist. Sector)
6. CMGSY-3054-80-196-1-03 ( Lumpsum )
7. 3054-80-196-1-01-300-(ಯೋಜನೇತರ) (ಟಾಸ್ಕ್‌ಪೋರ್ಸ್)
8. ಸುವರ್ಣ ಗ್ರಾಮೋದಯ /ಗ್ರಾಮ ವಿಕಾಸ ಯೋಜನೆ ಲೆಕ್ಕಶೀರ್ಷಿಕೆ:4215-02-800-002-132/422/423 (ಯೋಜನೆ)
9. ಗ್ರಾಮ ಪರಿಮಿತಿ ರಸ್ತೆಗಳ ಡಾಂಬರೀಕರಣ/ಕಾಂಕ್ರೀಟಿಕರಣ-3054-00-101-0-62
10. ಗಂಗಾ ಕಲ್ಯಾಣ-2702-00-101-0-92

ಈ ಎಲ್ಲಾ ಯೋಜನೆಗಳ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಗಳನ್ನು ಮತ್ತು ಅನುಷ್ಠಾನಗೊಳಿಸಿದ ನಂತರ ಆರ್ಥಿಕ ಹಾಗೂ ಭೌತಿಕ ಪ್ರಗತಿಯ ವಿವರಗಳನ್ನು ಪ್ರತಿ ಮಾಹೆ ಜಿಲ್ಲಾ ಪಂಚಾಯಿತಿಗಳು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಅನುಷ್ಠಾನಾಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿ ಸಂಬಂಧಪಟ್ಟ ಆರ್ಥಿಕ ಹಾಗೂ ಭೌತಿಕ ವರದಿಗಳನ್ನು ಪ್ರತಿ ಮಾಹೆ ಮೊದಲ ವಾರದಲ್ಲಿ ಕಡ್ಡಾಯವಾಗಿ ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಗೆ ಹಾಗೂ ಸರ್ಕಾರಕ್ಕೆ ಕಳುಹಿಸಿ ಕೊಡುವಂತೆ ಸೂಚಿಸುವುದು ಅವಶ್ಯವಿರುತ್ತದೆ. ಹಾಗೂ ಜಿಲ್ಲಾ ಪಂಚಾಯಿತಿಗಳಿಂದ ಬಂದಂತಹ ವರದಿಗಳನ್ನು ಕ್ರೋಢಿಕರಿಸಿ ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರು ಸರ್ಕಾರಕ್ಕೆ ಸಲ್ಲಿಸುವುದು ಸೂಕ್ತ ಕ್ರಮವಾಗುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂ:ಗ್ರಾಅಪ:127:ಆರ್‌ಆರ್‌ಸಿ:2015 ಬೆಂಗಳೂರು, ದಿನಾಂಕ:17-10-2015**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ವಿವಿಧ ಯೋಜನೆ / ಲೆಕ್ಕಶೀರ್ಷಿಕೆಗಳಡಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಹಾಗೂ ಪ್ರಗತಿಯ ವರದಿಯನ್ನು ಹಾಗೂ ಉಭಯ ಸದನಗಳಲ್ಲಿ ಮಾನ್ಯ ಸದಸ್ಯರು ಕೇಳುವ ಪ್ರಶ್ನಾವಳಿಗೆ/ವಿವಿಧ ಸಮಿತಿಗಳಿಗೆ ಸಲ್ಲಿಸಬೇಕಾದ ವರದಿಗಳನ್ನು ಜಿಲ್ಲಾ ಪಂಚಾಯತ್‌ಗಳ ಅನುಷ್ಠಾನಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖೇನ ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂನಿಯರಿಂಗ್ ಇಲಾಖೆ ರವರಿಗೆ ಪ್ರತಿ ಮಾಹೆಯ 10ನೇ ತಾರೀಖಿನೊಳಗೆ ಕಡ್ಡಾಯವಾಗಿ ಕಳುಹಿಸುವುದು.

ಅದರಂತೆ ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂನಿಯರಿಂಗ್ ಇಲಾಖೆ ರವರು ವಿವಿಧ ಜಿಲ್ಲಾ ಪಂಚಾಯತಿಗಳಿಂದ ಬಂದಂತಹ ಆರ್ಥಿಕ ಮತ್ತು ಭೌತಿಕ ವರದಿಗಳನ್ನು ಕ್ರೋಢಿಕೃತಗೊಳಿಸಿ ಸರ್ಕಾರಕ್ಕೆ ಪ್ರತಿ ಮಾಹೆಯ ಎರಡನೇ ವಾರದೊಳಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

19/10/15

(ಬೂವನಹಳ್ಳಿ ನಾಗರಾಜು)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು:**

1. ಮುಖ್ಯ ಇಂಜನಿಯರ್, ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.-9.
2. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಪಂಚಾಯತ್ ರಾಜ್ ಇಂಜನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು.
4. ಎಲ್ಲಾ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜನಿಯರ್‌ಗಳು.
5. ವೆಬ್‌ಸೈಟ್/ಮಾಹಿತಿಕೇಂದ್ರ- ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.